## ರಾಜ್ಯದಲ್ಲಿ 378 ಹೊಸ ಕೇಸ್ ಪತ್ತೆ | ಆರು ದಿನದಲ್ಲಿ 2000

# 5200 ದಾಟಿತು ಕರ್ನಾಟಕ ಸೋಂಕು

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಕೊರೊನಾ ಸಂಖ್ಯೆ ಏರುತ್ತಲೇ ಇದ್ದು, ಶನಿವಾರ ಐದು ಸಾವಿರ ಗಡಿ ದಾಟಿದೆ. ಜೂನ್ ತಿಂಗಳಲ್ಲಿ ಕೇವಲ 6 ದಿನಲ್ಲಿ 2ಸಾವಿರ ಪ್ರಕರಣ ದಾಖಲಿಸಿದೆ.

ಶನಿವಾರ 378 ಸೋಂಕಿತರು ಪತ್ತೆಯಾಗಿದ್ದಾರೆ. ಉಡುಪಿಯಲ್ಲಿ ಮತ್ತೆ 121 ಪ್ರಕರಣ ವರದಿಯಾಗಿದೆ. ರಾಜ್ಯದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 5213 ಕ್ಕೇರಿದೆ. ಶನಿವಾರದ ಸೋಂಕಿತರ ಪೈಕಿ 333 ಮಂದಿ ಹೊರ ರಾಜ್ಯದಿಂದ ಮತ್ತು 8 ಮಂದಿ ಬೇರೆ ದೇಶಗಳಿಂದ ಬಂದವರಾಗಿದ್ದಾರೆ. ಈವರೆಗೆ ಮಹಾರಾಷ್ಟ್ರದಿಂದ ಬಂದವರ ಪೈಕಿ 2813 ಮಂದಿ ಸೋಂಕಿತರಾಗಿದ್ದಾರೆ.

ಉಡುಪಿಯ 121, ಯಾದಗಿರಿಯ 102, ಕಲಬುರಗಿಯ 69, ದಕ್ಷಿಣ ಕನ್ನಡದ 24 ಮಂದಿ ಮಹಾರಾಷ್ಟ್ರದಿಂದ ಬಂದವರು. ಬೆಂಗಳೂರು ನಗರದಲ್ಲಿ 18, ವಿಜಯಪುರ, ದಾವಣಗೆರೆಯಲ್ಲಿ ತಲಾ 6, ಬೆಳಗಾವಿಯಲ್ಲಿ 5, ಗದಗದಲ್ಲಿ 4, ಮಂಡ್ಯ, ಹಾಸನ, ಹಾವೇರಿ, ಧಾರವಾಡದಲ್ಲಿ ತಲಾ 3, ರಾಯಚೂರು, ಚಿಕ್ಕಬಳ್ಳಾಪುರ, ಉತ್ತರ ಕನ್ನಡದಲ್ಲಿ ತಲಾ 2, ಬೀದರ್, ತುಮಕೂರು, ಕೋಲಾರ, ಕೊಪ್ಪಳದಲ್ಲಿ ತಲಾ ಒಂದು ಪ್ರಕರಣ ಪತ್ತೆಯಾಗಿದೆ.

**ಇಬ್ಬರು ನಿಧನ:** ಬೀದರ್‌ನ ಕಂಟೈನ್ಮೆಂಟ್ ಪ್ರದೇಶದ ನಿವಾಸಿ, 55 ವರ್ಷದ ಮಹಿಳೆ ಉಸಿರಾಟದ ತೀವ್ರ ತೊಂದರೆ, ಕೆಮ್ಮು ಹಿನ್ನೆಲೆಯಲ್ಲಿ ಮೇ 16 ರಂದು ಆಸ್ಪತ್ರೆಗೆ ದಾಖಲಾಗಿದ್ದರು. ಮೇ 5 ರಂದು ಅವರು ನಿಧನರಾಗಿದ್ದಾರೆ.

ವಿಜಯಪುರದ ಕಂಟೈನ್ಮೆಂಟ್ ಪ್ರದೇಶದ ನಿವಾಸಿ, 82 ವರ್ಷದ ವೃದ್ಧೆ ಮಧುಮೇಹ, ರಕ್ತದೊತ್ತಡ ಹಾಗೂ ಹೃದಯ ಸಂಬಂಧಿ ರೋಗ ಹೊಂದಿದ್ದು, ಮೇ 27 ರಂದು ಮನೆಯಲ್ಲಿ ನಿಧನರಾಗಿದ್ದರು. ಅವರಿಗೆ ಸೋಂಕು ಇತ್ತೆಂದು ವರದಿಯಿಂದ ತಿಳಿದುಬಂದಿದೆ.

**ಗುಣಮುಖ:** ಶನಿವಾರ 280 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಈವರೆಗೆ ಒಟ್ಟು 1968 ಮಂದಿ ಗುಣಮುಖರಾಗಿದ್ದಾರೆ. 11 ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ.

### ಐದು ಸಾವಿರದಲ್ಲಿ ಜಿಲ್ಲೆಗಳ ಪಾಲು




**425**
ರಾಜ್ಯದ ಇತರ 13 ಜಿಲ್ಲೆಗಳು ಮತ್ತು ಇತರೆ ರಾಜ್ಯದ 34 ಮಂದಿ ಸೇರಿ ಒಟ್ಟು425 ಪಾಸಿಟಿವ್ ದಾಖಲಾಗಿದೆ.

**4788**
ರಾಜ್ಯದ 16 ಜಿಲ್ಲೆಗಳ ಒಟ್ಟು ಸೋಂಕಿನ ಸಂಖ್ಯೆ 4788.

### ತಿಂಗಳ ಆರಂಭದಲ್ಲೇ ಉಡುಪಿ ಹ್ಯಾಟ್ರಿಕ್ ಶತಕ

**ಉಡುಪಿ:** ಜಿಲ್ಲೆಯು ಒಂದೇ ತಿಂಗಳಿನಲ್ಲಿ ಸೋಂಕಿನ ತ್ರಿಶತಕ ದಾಖಲಿಸಿದೆ. ಶನಿವಾರವೂ 121 ಹೊಸ ಪ್ರಕರಣಗಳು ದಾಖಲಾಗಿವೆ. ಉಡುಪಿ ಜಿಲ್ಲೆ ಒಟ್ಟು 889 ಸೋಂಕಿನ ಪ್ರಕರಣಗಳೊಂದಿಗೆ ರಾಜ್ಯಕ್ಕೇ ಮೊದಲ ಸ್ಥಾನಿಯಾಗಿದೆ. ಕಲಬುರಗಿ ಜಿಲ್ಲೆ ಒಟ್ಟು 621 ಪ್ರಕರಣಗಳೊಂದಿಗೆ ದ್ವಿತೀಯ ಸ್ಥಾನಿಯಾಗಿದೆ. 120 ಸೋಂಕಿನ ಪ್ರಕರಣಗಳು ಮಹಾರಾಷ್ಟ್ರ ಮೂಲ ಹೊಂದಿದ್ದು, ಒಂದು ಪ್ರಕರಣ ದಕ್ಷಿಣ ಕನ್ನಡಕ್ಕೆ ಸೇರಿದೆ.

**ಉಡುಪಿಗೆ ಈಗ ದಿಲ್ಲಿ, ಕೇರಳದ ಭಯ:** ಮುಂಬಯಿ, ದಿಲ್ಲಿ, ಕೇರಳದಿಂದ ಒಟ್ಟು 230 ಪ್ರಯಾಣಿಕರು ರೈಲಿನ ಮೂಲಕ ಬಂದು ಉಡುಪಿಯ ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ ಶನಿವಾರ ಇಳಿದಿದ್ದಾರೆ. ನೋಂದಣಿ, ಥರ್ಮಲ್ ತಪಾಸಣೆ ಬಳಿಕ ಸೀಲ್ ಹಾಕಿ ತಾಲೂಕುವಾರು ಸ್ವೀಕಾರ ಕೇಂದ್ರದ ಮೂಲಕ ಉಡುಪಿ: 43, ಕಾಪು: 22, ಬ್ರಹ್ಮಾವರ: 22, ಕಾರ್ಕಳದ 139 ಮಂದಿಯನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ನಾಲ್ವರನ್ನು ಚಿಕ್ಕಮಗಳೂರಿಗೆ ಕಳುಹಿಸಲಾಯಿತು.

### ಸಾವಿರ ಏರಿಕೆ ದಿನಗಳು

| | | |
|---|---|---|
| ಮಾ.9 | 67 ದಿನ | 01 |
| ಮೇ 15 | 10 ದಿನ | 1000 |
| ಮೇ 25 | 6 ದಿನ | 2000 |
| ಮೇ31 | 3 ದಿನ | 3000 |
| ಜೂ.3 | 2 ದಿನ | 4000 |
| ಜೂ.6 | | 5000 |

### ಕ್ವಾರಂಟೈನ್ ಸೀಲ್‌ನೊಂದಿಗೆ ಯತಿ ನಗರ ಸಂಚಾರ

**ಉಡುಪಿ:** ಕೈಯಲ್ಲಿ ಕ್ವಾರಂಟೈನ್ ಸೀಲ್ ಇದ್ದರೂ ಸಾರ್ವಜನಿಕವಾಗಿ ಅಲೆದಾಡಿ ಆತಂಕ ಸೃಷ್ಟಿಸಿದ ಹಿರಿಯ ಯತಿಗಳೂ ಸೇರಿದಂತೆ ಇಬ್ಬರನ್ನು ಪೊಲೀಸರು ಕ್ವಾರಂಟೈನ್ ಕೇಂದ್ರಕ್ಕೆ ಶನಿವಾರ ದಾಖಲಿಸಿದ್ದಾರೆ.

ಒಬ್ಬರು ಕೇರಳದ ಮಠವೊಂದರಲ್ಲಿರುವ ಹಿರಿಯ ಯತಿಯಾಗಿದ್ದು, ಕೇರಳದಿಂದ ಮಂಗಳೂರು ಮೂಲಕ ಹಾಗೂ ಶಿವಮೊಗ್ಗ ಮೂಲದ ಮಹಿಳೆ ವಾರಾಣಸಿಯಿಂದ ರೈಲು ಮೂಲಕ ಮಂಗಳೂರಿನಿಂದ ಉಡುಪಿಗೆ ಶುಕ್ರವಾರ ಆಗಮಿಸಿದ್ದರು. ಜೂ.19ರ ತನಕ ಹೋಂ ಕ್ವಾರಂಟೈನ್ ವಿಧಿಸಲಾಗಿದೆ.

ಹೊರ ರಾಜ್ಯದಿಂದ ಬಂದ ಈ ಇಬ್ಬರು ಸಾರ್ವಜನಿಕವಾಗಿ ತಿರುಗಾಡುತ್ತಿರುವುದನ್ನು ಗಮನಿಸಿದ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಕ್ವಾರಂಟೈನ್‌ಗೆ ದಾಖಲಿಸಿದರೂ ಹೋಂ ಕ್ವಾರಂಟೈನ್ ನಿಟ್ಟಿನಲ್ಲಿ ಮತ್ತೆ ಬಿಡುಗಡೆ ಮಾಡಿ ಕಳುಹಿಸಲಾಗಿದೆ. ಜಿಲ್ಲಾ ನಾಗರಿಕ ಸಮಿತಿ ಉಚಿತ ಆಂಬ್ಯುಲೆನ್ಸ್ ಒದಗಿಸಿದೆ ಎಂದು ನಿತ್ಯಾನಂದ ಒಳಕಾಡು ತಿಳಿಸಿದ್ದಾರೆ.



ಉಡುಪಿಯಲ್ಲಿ ಕಾಣಿಸಿಕೊಂಡ ಯತಿಯೊಬ್ಬರ ಕೈಯಲ್ಲಿ ಕ್ವಾರಂಟೈನ್ ಸೀಲ್.

### ವಿಜಯಪುರದ ವೃದ್ಧೆ ಸಾವು, ಮೃತರು 6ಕ್ಕೆ

**ವಿಜಯಪುರ:** ತೀವ್ರ ಉಸಿರಾಟದ ತೊಂದರೆ, ಹೃದಯ ಕಾಯಿಲೆಯಿಂದ ಬಳಲುತ್ತಿದ್ದ 82 ವರ್ಷದ ವೃದ್ಧೆ (ಪಿ.5010) ಮೃತಪಟ್ಟಿದ್ದು, ಆ ಮೂಲಕ ಜಿಲ್ಲೆಯಲ್ಲಿ ಮೃತಪಟ್ಟವರ ಸಂಖ್ಯೆ 6ಕ್ಕೆ ಏರಿದೆ.

ನಗರದ ಕಂಟೈನ್ಮೆಂಟ್ ವಲಯದಲ್ಲಿ ಒಟ್ಟು 60 ಜನರು ತೀವ್ರ ಉಸಿರಾಟ ತೊಂದರೆಯಿಂದ ಬಳಲುತ್ತಿದ್ದವರು. ಅವರೆಲ್ಲರ ಗಂಟಲು ದ್ರವ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿತ್ತು. ಈ ಪೈಕಿ 20 ಜನರಿಗೆ ಪಾಸಿಟಿವ್ ದೃಢಪಟ್ಟಿತ್ತು ಎಂದು ಜಿಲ್ಲಾಧಿಕಾರಿ ವೈ. ಎಸ್. ಪಾಟೀಲ ತಿಳಿಸಿದ್ದಾರೆ.

ಪ್ರತಿದಿನ ಆರೋಗ್ಯ ಪರೀಕ್ಷೆ ವೇಳೆ ಈ ವೃದ್ಧೆಗೆ ಯಾವುದೇ ಲಕ್ಷಣ ಕಂಡುಬಂದಿಲ್ಲ, ಮರಣ ಪರಿಶೋಧನೆ ವರದಿ ಪುನರ್ ಖಾತರಿ ಮಾಡಿಕೊಂಡಿದ್ದು ವೃದ್ಧರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂದು ವರದಿಯಿಂದ ತಿಳಿದು ಬಂದಿದೆ ಎಂದರು.

### ವೈದ್ಯ ಸೇರಿದಂತೆ ನಾಲ್ವರಿಗೆ ಪಾಸಿಟಿವ್

**ಗದಗ: ಜಿಲ್ಲೆಯಲ್ಲಿ ವೈದ್ಯ ಸೇರಿದಂತೆ ಒಟ್ಟು ನಾಲ್ವರಿಗೆ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ. ಸೋಂಕಿತ ನಾಲ್ವರ ಪೈಕಿ ಇಬ್ಬರಿಗೆ ಪಿ-4079 ವ್ಯಕ್ತಿಯ ಸಂಪರ್ಕದಿಂದ ಸೋಂಕು ತಗುಲಿದರೆ, ಜಿಮ್ಸ್ ಆಸ್ಪತ್ರೆಯ ವೈದ್ಯ 29 ವರ್ಷದ ಪಿ-5014, ಹೊಳೆಆಲೂರು ಗ್ರಾಮದಿಂದ ಡಯಾಲಿಸಿಸ್ ಚಿಕಿತ್ಸೆಗೆಂದು ಬಂದ 28 ವರ್ಷದ ಮಹಿಳೆ ಪಿ- 5015, ಡಯಾಲಿಸಿಸ್ ಮಾಡುತ್ತಿದ್ದ ಟೆಕ್ನಿಷಿಯನ್ 32 ವರ್ಷದ ಪಿ-5016, ಲಕ್ಕುಂಡಿ ಗ್ರಾಮದ 29 ವರ್ಷದ ಪಿ-5017 ಯುವಕನಿಗೆ ಸೋಂಕು ಇರುವುದು ದೃಢಪಟ್ಟಿದೆ.**